**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ,ಅರಸೀಕೆರೆ.**

**ಸಿ.ಸಿ. 172/2025**

**ಫಿರ್ಯಾದುದಾರರು :** ಸರ್ವಮಂಗಳಾ

: ವಿರುದ್ಧ:

**ಆರೋಪಿ** : ಎಸ್.ಎನ್.ಪರಮೇಶ್ವರಪ್ಪ

ಆಪಾದನೆ

ಶ್ರೀ. ಕಿರಣ್ ಕುಮಾರ್ ಡಿ.ವಡಿಗೇರಿ, ಬಿ.ಎ.ಎಲ್. ಎಲ್.ಎಲ್.ಬಿ. ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಅರಸೀಕೆರೆ ಆದ ನಾನು, ಆರೋಪಿಯಾದಃ-

ಎಸ್.ಎನ್.ಪರಮೇಶ್ವರಪ್ಪ
ಬಿನ್ ನಿರ್ವಾಣಪ್ಪ,
ಕಾಲಮುರುಡೇಶ್ವರ ಸ್ವಾಮಿ ದೇವಸ್ಥಾನ,
ಸಕ್ರಾಯಪಟ್ಟಣ, ಸಕ್ರಾಯಪಟ್ಟಣ ಹೋಬಳಿ,
ಕಡೂರು ತಾಲ್ಲೂಕು.

ನಿಮ್ಮ ಮೇಲೆ ಆರೋಪಿಸುವುದೇನೆಂದರೆಃ-

ಫಿರ್ಯಾದುದಾರರು ಮತ್ತು ಆರೋಪಿತರಾದ ನೀವು ಪರಸ್ಪರ ಪರಿಚಯಸ್ಥರಾಗಿದ್ದು ನಿಮ್ಮ ಗೃಹಕೃತ್ಯದ ಖರ್ಚಿಗಾಗಿ, ವೈಯಕ್ತಿಕ ಸಾಲ ತಿರುವಳಿ ಹಾಗೂ ದರ್ದು ನಿಮಿತ್ತ ಫಿರ್ಯಾದುದಾರರಿಂದ ದಿಃ30.06.2024 ರಂದು ರೂ.58,000/- ಗಳನ್ನು ಕೈಗಡ ಸಾಲವಾಗಿ ನಗದು ರೂಪದಲ್ಲಿ ಪಡೆದುಕೊಂಡಿರುತ್ತೀರಿ. ಸದರಿ ಸಾಲದ ಹಣವನ್ನು 1 ತಿಂಗಳೊಳಗಾಗಿ ಮರುಪಾವತಿ ಮಾಡುವುದಾಗಿ ಹೇಳಿರುತ್ತೀರಿ. ಸದರಿ ಅವಧಿ ಮುಗಿದ ನಂತರ ಫಿರ್ಯಾದುದಾರರು ನಿಮ್ಮನ್ನು ಸಾಲದ ಹಣ ಮರುಪಾವತಿಸುವಂತೆ ದಿಃ25.08.2024 ರಂದು ಕೇಳಿದಾಗ ರೂ.58,000 ರೂ.ಗಳಿಗೆ ಕೆನರಾ ಬ್ಯಾಂಕ್, ಸಕ್ರಾಯಪಟ್ಟಣ ಶಾಖೆಯ ಚೆಕ್ ನಂಃ 026173 ನ್ನು ಫಿರ್ಯಾದುದಾರರ ಹೆಸರಿಗೆ ಬರೆದುಕೊಟ್ಟಿರುತ್ತೀರಿ. ಸದರಿ ಹಣವನ್ನು ನಗದೀಕರಿಸಲು ಫಿರ್ಯಾದುದಾರರು ಕೆನರಾ ಬ್ಯಾಂಕ್, ಅರಸೀಕೆರೆ ಶಾಖೆಯ ಮುಖಾಂತರ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ನಿಮ್ಮ ಖಾತೆಯಲ್ಲಿ ಚೆಕ್ ನಗದಾಗುವಷ್ಟು ಹಣ ಇಲ್ಲ ಎಂದು “Funds Insufficient" ಎಂಬ ಷರಾದೊಂದಿಗೆ ಸದರಿ ಚೆಕ್ಕನ್ನು ಅಮಾನ್ಯಗೊಳಿಸಿ ದಿಃ 26.08.2024

ರಂದು ವಾಪಸ್ಸು ಮಾಡಿರುತ್ತಾರೆ. ಈ ಬಗ್ಗೆ ನಿಮಗೆ ಫಿರ್ಯಾದುದಾರರಿಂದ ದಿಃ 24.09.2024 ರಂದು ನೋಟೀಸನ್ನು ನೀಡಿದ್ದು, ಸದರಿ ನೋಟೀಸು ವಿಚಾರ ಆರೋಪಿಯಾದ ನಿಮಗೆ ತಿಳಿದಿದ್ದರೂ ಸಹ ಸದರಿ ಚೆಕ್ ನ ಹಣವನ್ನು ಪಾವತಿಸದೇ ಹಾಗೂ ಸದರಿ ನಿಮ್ಮ ಖಾತೆಯಲ್ಲಿ ಚೆಕ್ ನಗದಾಗುವಷ್ಟು ಹಣ ಇರದೇ ಇದ್ದರೂ ಸಹ ಸದರಿ ವಿಚಾರವನ್ನು ಫಿರ್ಯಾದುದಾರರಿಂದ ಮುಚ್ಚಿಟ್ಟು ಮೋಸ ಮಾಡುವ ಉದ್ದೇಶದಿಂದ ಚೆಕ್ ನೀಡಿರುತ್ತೀರಿ. ಈ ಮೂಲಕ "ನೆಗೋಷಿಯಬಲ್ ಇನ್ ಸ್ಟ್ರುಮೆಂಟ್ಸ್ " ಕಲಂ 138 ಎನ್.ಐ ಆಕ್ಟ್ ರಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾತಿಯಲ್ಲಿ ಮಾಡಿರುತ್ತೀರಿ.

**ಪ್ರಶ್ನೆಃ-** ಮೇಲೆ ಓದಿ ಹೇಳಿದ ಆಪಾದನೆಯು ಅರ್ಥವಾಯಿತೇ?

**ಉತ್ತರಃಃ ತಿಳಿಯಿತು**

**ಪ್ರಶ್ನೆಃ-** ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುವಿರೇ?ಅಥವಾ ವಿಚಾರಣೆಯಾಗಬೇಕೆ?

**ಉತ್ತರಃಃ** ಇಲ್ಲಾ, ವಿಚಾರಣೆಯಾಗಬೇಕು

(ಮೇಲಿನ ಆಪಾದನೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡದಲ್ಲಿ ಓದಿ ಹೇಳಿ, ಅವರು ಅರ್ಥೈಸಿಕೊಂಡು ನೀಡಿದ ಉತ್ತರವನ್ನು ಸರಿಯಾಗಿ ನನ್ನ ಸ್ವ ಹಸ್ತದಿಂದ ಬರೆದುಕೊಂಡಿರುತ್ತೇನೆಂದು ದೃಢೀಕರಿಸುತ್ತೇನೆ.)

( ಕಿರಣ್‌ಕುಮಾರ್ ಡಿ.ವಡಿಗೇರಿ)
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಅರಸೀಕೆರೆ.